ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/02/ಎಸ್‌ಸಿಹೆಚ್(1)2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001.
ದಿನಾಂಕ: 25-07-2018.

-:: ಸುತ್ತೋಲೆ ::-

ವಿಷಯ:- 2018-19ನೇ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಬಿ.ಇ ಮತ್ತು ಎಂ.ಇ/ಎಂ.ಟೆಕ್ ಇಂಜನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ **ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ** ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಸಕಇ 178 ಪಕವಿ 2015, ದಿ: 31-12-2015.
2. ಸರ್ಕಾರದ ಆದೇಶ ಸಂಖ್ಯೆ: ಸಕಇ 178 ಪಕವಿ 2015, ದಿ: 30-06-2016.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 23 ಹೆಚ್‌ಟಿಟಿ 2018, ದಿ: 09/04/2018

-**&**-

2018-19ನೇ ಸಾಲಿನಿಂದ ಉಲ್ಲೇಖ(1) & (2)ರ ಸರ್ಕಾರಿ ಆದೇಶದ ಪ್ರಕಾರ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಬಿ.ಇ./ಬಿ.ಟೆಕ್, ಬಿ.ಆರ್ಕ್ ಮತ್ತು ಎಂ.ಇ/ಎಂ.ಟೆಕ್ ಇಂಜನಿಯರಿಂಗ್ ಕಾಲೇಜುಗಳಲ್ಲಿ ಕೆ.ಇ.ಎ (ಸಿ.ಇ.ಟಿ)/ಕಾಮೆಡ್-ಕೆ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ಕಾಲೇಜುಗಳ ಮೂಲಕ ಹಂಚಿಕೆಯಾಗಿ ಸೀಟು ಪಡೆದು ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕರ್ನಾಟಕದ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕವಿನಾಯಿತಿಯನ್ನು ನೀಡಲು ಉಲ್ಲೇಖ (1)ರ ಮತ್ತು (2)ರ ಸರ್ಕಾರದ ಆದೇಶದಲ್ಲಿ ಆದೇಶಿಸಿರುವ ಹಿನ್ನೆಲೆಯಲ್ಲಿ, ಅರ್ಜಿಯನ್ನು ಕರೆಯಲಾಗಿದ್ದು, ಕುಟುಂಬದ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ.2.50 ಲಕ್ಷದಿಂದ ರೂ.10.00 ಲಕ್ಷಗಳ ಮಿತಿಯೊಳಗಿರುವವರು ಸಿ.ಇ.ಟಿ ಮೂಲಕ ಆಯ್ಕೆಯಾದ ಬಿ.ಇ. ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ **ಶೇ.100ರಷ್ಟು** ಹಾಗೂ ಪಿ.ಜಿ.ಸಿ.ಇ.ಟಿ ಯಿಂದ ಎಂ.ಇ/ಎಂ.ಟೆಕ್ ಮತ್ತು ಕಾಮೆಡ್-ಕೆ, ಡೀಮ್ಡ್ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಆಯ್ಕೆಯಾಗುವ ಬಿ.ಇ. ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ **ಶೇ.50ರಷ್ಟು** ಶುಲ್ಕವಿನಾಯಿತಿಯನ್ನು ನೀಡಲಾಗುವುದೆಂದು ತಿಳಿಸಿರುತ್ತದೆ. ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಮನದಟ್ಟು ಮಾಡಲು ಸಂಸ್ಥೆಯ ಸೂಚನಾಫಲಕದಲ್ಲಿ(Notice board) ಪ್ರಚುರ ಪಡಿಸುವುದು.

1. ಕೆ.ಇ.ಎ (ಸಿ.ಇ.ಟಿ), ಕಾಮೆಡ್-ಕೆ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ಕಾಲೇಜುಗಳ ಹಾಗೂ ಪಿ.ಜಿ.ಸಿ.ಇ.ಟಿ ಮೂಲಕ ಪ್ರವೇಶ ಪಡೆದು ಆಯ್ಕೆಯಾದಂತಹ ಅರ್ಹ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಲು ಸೂಚನಾ ಫಲಕದಲ್ಲಿ ಪ್ರಕಟಿಸಿರುವುದನ್ನು ಗಮನಿಸುವುದು. ಸಂಸ್ಥೆಯ ಪ್ರಾಂಶುಪಾಲರು ಪ್ರತಿಯೊಬ್ಬ ವಿದ್ಯಾರ್ಥಿಗೂ ಇಲಾಖೆಯಿಂದ ದೊರೆಯುವ ಶುಲ್ಕವಿನಾಯಿತಿ ಸೌಲಭ್ಯದ ಬಗ್ಗೆ ಅಗತ್ಯ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ವಿಭಾಗದ ಮುಖ್ಯಸ್ಥರ ಅಥವಾ ಹಿರಿಯ ಬೋಧಕ ಸಿಬ್ಬಂದಿಯವರ ಸಹಕಾರದಿಂದ ತಲುಪುವ ರೀತಿಯಲ್ಲಿ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು ಹಾಗೂ ಈ ಮಾಹಿತಿ ತಿಳಿದಿರುವುದಕ್ಕೆ ವಿದ್ಯಾರ್ಥಿಗಳಿಂದ ಸಹಿ ಪಡೆದುಕೊಳ್ಳುವುದು. ವಿದ್ಯಾರ್ಥಿಗಳಿಗೆ ಮಾಹಿತಿ ದೊರಕದೆ, ಅರ್ಜಿ ಹಾಕಲು ಸಾಧ್ಯವಾಗಲಿಲ್ಲ ಎಂಬ ದೂರು ಬಾರದ ರೀತಿಯಲ್ಲಿ ಎಚ್ಚರವಹಿಸತಕ್ಕದ್ದು.

2. ಶುಲ್ಕವಿನಾಯಿತಿಗೆ ಪೂರ್ಣವಾಗಿ ಭರ್ತಿಮಾಡಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಪಡೆಯಬೇಕು. ಅರ್ಜಿಯ ಜೊತೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ನಿಗಧಿಪಡಿಸಿದ ನಮೂನೆ-ಡಿ ನಲ್ಲಿ ತಹಶೀಲ್ದಾರ್ ನೀಡಿರುವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳ ದೃಢೀಕರಣದೊಂದಿಗೆ ಈ ಸುತ್ತೋಲೆಯಲ್ಲಿ ತಿಳಿಸಿದ ಇತರೆ ದಾಖಲೆಗಳೊಂದಿಗೆ ಲಗತ್ತಿಸಿರಬೇಕು. ಒಂದು ಪ್ರತಿಯನ್ನು ಕಾಲೇಜಿನ ಕಛೇರಿಯಲ್ಲಿ ದಾಖಲಾತಿಗೆ ಇಟ್ಟುಕೊಂಡು ಮೂಲ ಅರ್ಜಿ (ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ) ಕವರಿಂಗ್ ಲೇಟರ್‌ನೊಂದಿಗೆ ಈ ಕಛೇರಿಗೆ ಮಂಜೂರಾತಿಗಾಗಿ ಕಳುಹಿಸಿಕೊಡತಕ್ಕದ್ದು.

3. 2018-19ನೇ ಸಾಲಿಗೆ ಅರ್ಹ ವಿದ್ಯಾರ್ಥಿಗಳಿಂದ ಇಂಜನಿಯರಿಂಗ್ ಕಾಲೇಜುಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಮತ್ತು ಸಲ್ಲಿಸಲು ಅಂತಿಮ ದಿನಾಂಕ: **25-10-2018** ರಂದು ನಿಗದಿಪಡಿಸಲಾಗಿದೆ.

4. ಆಡಳಿತ ಮಂಡಳಿಯ ಕೋಟಾದಡಿ ಸೀಟು ಪಡೆದ ವಿದ್ಯಾರ್ಥಿಗಳು ಹಾಗೂ ಜಿ.ಓ.ಐ (Government of India) ಸೀಟು ಪಡೆದ ವಿದ್ಯಾರ್ಥಿಗಳು ಈ ಶುಲ್ಕವಿನಾಯಿತಿಗೆ ಅರ್ಹರಲ್ಲ.

5. ಸರ್ಕಾರದ ಮೆರಿಟ್ ಸೀಟು (ಕೆ.ಇ.ಎ, ಕಾಮೆಡ್-ಕೆ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ಮುಖಾಂತರ ಪ್ರವೇಶಾತಿ) ಪಡೆದ ಅರ್ಹ ವಿದ್ಯಾರ್ಥಿಗಳು ಮಾತ್ರ ಶುಲ್ಕವಿನಾಯಿತಿಗೆ ಅರ್ಹರಾಗಿರುವುದರಿಂದ ಪ್ರಸ್ತಾವನೆಗಳನ್ನು ಮಂಜೂರಾತಿಗೆ ಕಳುಹಿಸುವ ಮೊದಲು ಕೂಲಂಕುಷವಾಗಿ ಕೆಳಗೆ ನೀಡಿರುವ ಸೂಚನೆಯಾನುಸಾರ ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ವಿದ್ಯಾರ್ಥಿಗಳ ಅರ್ಜಿ ಮತ್ತು ಅಗತ್ಯವಾದ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಕಳುಹಿಸಿಕೊಡಬೇಕು.

| | |
|---|---|
| ಅ. | ವಿದ್ಯಾರ್ಥಿಗಳು ಸಲ್ಲಿಸುವ ಜೆರಾಕ್ಸ್ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿ(ಗೆಜೆಟೆಡ್ ಅಧಿಕಾರಿ) ಯವರಿಂದ ದೃಢೀಕರಿಸಬೇಕು. |
| ಆ. | ವಿದ್ಯಾರ್ಥಿಗಳು ನಿಗದಿಪಡಿಸಿರುವ ಅರ್ಜಿಯಲ್ಲಿಯೇ ತಮ್ಮ ಸ್ವತಃ ಬರವಣಿಗೆಯಲ್ಲಿ ಮಾಹಿತಿ ತುಂಬಿ ಸಲ್ಲಿಸಬೇಕು. ವಿದ್ಯಾರ್ಥಿಯು ತುಂಬಿದ ಅರ್ಜಿಯನ್ನು ಪ್ರಾಂಶುಪಾಲರ ಸಹಿ ಹಾಗೂ ಸಂಸ್ಥೆಯ ಕವರಿಂಗ್‌ಲೆಟರ್‌ನೊಂದಿಗೆ ಕಳುಹಿಸಿಕೊಡಬೇಕು (ಜೆರಾಕ್ಸ್ ಪ್ರತಿ ಸಲ್ಲಿಸಬಾರದು). |
| ಇ. | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ನಮೂನೆ-ಡಿ ಯಲ್ಲಿ ಜಾತಿ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು ಮತ್ತು ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ.2.50 ಲಕ್ಷದಿಂದ ರೂ.10.00 ಲಕ್ಷದ ಮಿತಿಯೊಳಗಿರುವವರು ಶುಲ್ಕವಿನಾಯಿತಿಯನ್ನು ಪಡೆಯುವ ಸಲುವಾಗಿ ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಆದಾಯ ಪ್ರಮಾಣ ಪತ್ರವನ್ನು ಪಡೆದು ಪ್ರತಿ ವರ್ಷವು ಸಲ್ಲಿಸಬೇಕು. |
| ಈ. | ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರು ಸರ್ಕಾರಿ/ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಅವರ ವೇತನ ಪ್ರಮಾಣ ಪತ್ರ(Salary Slip)ವನ್ನು ಸಲ್ಲಿಸಬೇಕು. ಪತ್ರಾಂಕಿತ ಅಧಿಕಾರಿಗಳಾಗಿದ್ದರೆ, ಮಹಾಲೇಖಪಾಲರ ಕಛೇರಿಯವರು ನೀಡಿರುವ ವೇತನ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬಹುದಾಗಿರುತ್ತದೆ. ಖಾಸಗಿ/ಸ್ವ-ಉದ್ಯೋಗದಲ್ಲಿರುವವರು ಮತ್ತು ಇತರೆ ಉದ್ಯಮದಲ್ಲಿರುವವರು ಸಂಬಂಧಪಟ್ಟ ತಹಸೀಲ್ದಾರ್‌ರಿಂದ ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ವಿದ್ಯಾರ್ಥಿಯ ತಂದೆ/ತಾಯಿ ಮರಣ ಹೊಂದಿದ್ದರೆ, ಮರಣ ಪ್ರಮಾಣ ಪತ್ರವನ್ನು ಲಗತ್ತಿಸಿ, ಮೇಲೆ ತಿಳಿಸಿದಂತೆ ಪೋಷಕರ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. |
| ಉ. | ಪ್ರತಿಯೊಬ್ಬ ವಿದ್ಯಾರ್ಥಿಯು ಶುಲ್ಕವಿನಾಯಿತಿಗೆ ಅರ್ಜಿ ಸಲ್ಲಿಸುವಾಗ ಕೋಟಾದಲ್ಲಿ ಪ್ರವೇಶ ಪಡೆದ ಬಗ್ಗೆ ಸಿ.ಇ.ಟಿ ಪ್ರವೇಶ ಹಂಚಿಕೆ ಪತ್ರ (C.E.T Admission Order), ಕಾಮೆಡ್-ಕೆ ಪ್ರವೇಶ ಹಂಚಿಕೆ ಪತ್ರದೊಡನೆ ಶುಲ್ಕ ಪಾವತಿಯ ರಸೀತಿ (COMED-K Admission order & fee receipt) ಮತ್ತು ಡೀಮ್ಡ್ ವಿಶ್ವವಿದ್ಯಾಲಯದ (Deemed University Admission order & fee receipt) ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದ ಹಂಚಿಕೆ ಪತ್ರ ಲಗತ್ತಿಸಬೇಕು. (ಪ್ರವೇಶ ಪರೀಕ್ಷೆಯ ಅಡ್ಮಿಷನ್ ಟಿಕೇಟನ್ನು ಮತ್ತು ಆನ್-ಲೈನ್ ಮುಖಾಂತರ ಪ್ರವೇಶಾತಿ ಸಂದೇಶದ ಮಾಹಿತಿಯ ಪ್ರತಿಗಳನ್ನು ಅಂಗೀಕರಿಸಲಾಗುವುದಿಲ್ಲ) |
| ಊ. | ವಿದ್ಯಾರ್ಥಿಯು ಬಿ.ಇ ವ್ಯಾಸಂಗ ಮುಂದುವರೆಸದೆ ಮೊಟಕುಗೊಳಿಸಿದ ಸಂದರ್ಭದಲ್ಲಿ ವಿವರವನ್ನು ಹಾಗೂ ಕಾರಣವನ್ನು ವಿದ್ಯಾರ್ಥಿಯಿಂದ ಪ್ರತ್ಯೇಕವಾಗಿ ಪಡೆದು ಮತ್ತು ಪ್ರಾಂಶುಪಾಲರು ಶಿಫಾರಸ್ಸಿನೊಂದಿಗೆ ಈ ಕಛೇರಿಗೆ ಕೂಡಲೇ ನೀಡುವುದು. ತಪ್ಪಿದಲ್ಲಿ ಪ್ರಾಂಶುಪಾಲರು ವಿದ್ಯಾರ್ಥಿಗೆ ಮಂಜೂರಾತಿ ನೀಡಿದ ಹಣವನ್ನು ಸರ್ಕಾರಕ್ಕೆ ಜಮಾ ಮಾಡುವ ಕ್ರಮವನ್ನು ವಹಿಸಿಕೊಳ್ಳಬೇಕಾದ ಪ್ರಸಂಗ ಉದ್ಭವಿಸಬಹುದು. |
| ಋ. | ವಿದ್ಯಾರ್ಥಿಯ ಸದ್ವರ್ತನೆ ಹಾಗೂ ನಿಯತಕಾಲಿಕ ಹಾಜರಾತಿಯನ್ನು ಗಮನಿಸಿ ಪ್ರತಿಯೊಂದು ವಿದ್ಯಾರ್ಥಿಯ ಅರ್ಜಿಯಡಿಯಲ್ಲಿ ಪ್ರಾಂಶುಪಾಲರು ಲಿಖಿತವಾಗಿ ಶಿಫಾರಸ್ಸು ಮಾಡಿರಬೇಕು. |
| ೠ. | ವಿದ್ಯಾರ್ಥಿಯು ಕೆಳಕಂಡಂತೆ ಹಿಂದಿನ ವರ್ಷದ ಎಲ್ಲಾ ಅಂಕಪಟ್ಟಿಗಳ(ಪೂರಕ ಪರೀಕ್ಷೆಯು ಸೇರಿದಂತೆ) ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಿರಬೇಕು. ವಿದ್ಯಾರ್ಥಿಯು ಯಾವುದೇ ಸೆಮಿಸ್ಟರ್‌ನ ಅಂಕಪಟ್ಟಿಯು ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಬಂದಿಲ್ಲದ ಸಂದರ್ಭದಲ್ಲಿ ಆನ್‌ಲೈನ್‌ನಲ್ಲಿ ಪಡೆದ ಫಲಿತಾಂಶದ ಪ್ರತಿಯನ್ನು ಪ್ರಾಂಶುಪಾಲರು ದೃಢೀಕರಿಸಿ ಲಗತ್ತಿಸಬಹುದು. |

| ಕ್ರಸಂ | ವ್ಯಾಸಂಗ ಮಾಡುತ್ತಿರುವ ವರ್ಷ | ಸಲ್ಲಿಸಬೇಕಾದ ಅಂಕಪಟ್ಟಿಗಳು |
|---|---|---|

| | | | |
|---|---|---|---|
| 1 | 1ನೇ ವರ್ಷ ಬಿ.ಇ/ಬಿ.ಟೆಕ್/ಬಿ.ಆರ್ಕ್ | – | ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿ |
| 2 | 1ನೇ ವರ್ಷ ಎಂ.ಇ/ಎಂ.ಟೆಕ್ | – | ಬಿ.ಇ/ಬಿ.ಟೆಕ್ 7 ಮತ್ತು 8ನೇ ಸೆಮಿಸ್ಟರ್ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರ |
| 3 | 2ನೇ ವರ್ಷ ಬಿ.ಇ/ಬಿ.ಟೆಕ್/ಬಿ.ಆರ್ಕ್ | – | 1 ಮತ್ತು 2ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು. |
| 4 | 2ನೇವರ್ಷ ಎಂ.ಇ/ಎಂ.ಟೆಕ್/ಬಿ.ಆರ್ಕ್ | – | 1 ಮತ್ತು 2ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು. |
| 5 | 3ನೇ ವರ್ಷ ಬಿ.ಇ/ಬಿ.ಟೆಕ್/ಬಿ.ಆರ್ಕ್ | – | 3 ಮತ್ತು 4ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು. |
| 6 | 4ನೇ ವರ್ಷ ಬಿ.ಇ/ಬಿ.ಟೆಕ್/ಬಿ.ಆರ್ಕ್ | – | 5 ಮತ್ತು 6ನೇ ಸೆಮಿಸ್ಟರ್‌ನ ಅಂಕಪಟ್ಟಿಗಳು. |

6. ಅರ್ಜಿ ನಮೂನೆಯಲ್ಲಿ ವಿದ್ಯಾರ್ಥಿಯು ನೀಲಿ ಶಾಹಿಯನ್ನು(Blue Ink) ಮಾತ್ರ ಬಳಸಿ ಮಾಹಿತಿಯನ್ನು ತುಂಬಬೇಕು. ವಿದ್ಯಾರ್ಥಿಗಳಿಂದ ಕಪ್ಪು ಶಾಹಿಯಲ್ಲಿ(Black Ink) ಮಾಹಿತಿಯನ್ನು ತುಂಬದಂತೆ ಅವರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವುದು.

7. ಪ್ರಸಕ್ತ ಸಾಲಿನಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು. ಅಂದರೆ ಅಂತಿಮ ದಿನಾಂಕದೊಳಗೆ ಬಂದ ಅರ್ಹರಾದ ಪರಿಶಿಷ್ಟ ಜಾತಿಗೆ ಸೇರಿದ ಎಲ್ಲಾ ವಿದ್ಯಾರ್ಥಿಗಳ ಹೆಸರನ್ನು ಲಗತ್ತಿಸಿರುವ ಅನುಬಂಧ-1ಎ ಮತ್ತು ಅನುಬಂಧ- 2ರಲ್ಲಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಎಲ್ಲಾ ವಿದ್ಯಾರ್ಥಿಗಳ ಹೆಸರನ್ನು ಲಗತ್ತಿಸಿರುವ ಅನುಬಂಧ-1ಬಿ ಮತ್ತು ಅನುಬಂಧ-2ರಲ್ಲಿ ಪಟ್ಟಿಮಾಡಿ ಪ್ರತ್ಯೇಕವಾಗಿ ದ್ವಿ-ಪ್ರತಿಗಳಲ್ಲಿ ಕಳುಹಿಸಿಕೊಡಬೇಕು. ಪ್ರತಿಯೊಂದು ಪ್ರತಿಯ ಮೇಲೆ ಹಾಗೂ ಎಲ್ಲಾ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಪ್ರಾಂಶುಪಾಲರ ಸಹಿ(ಫ್ಯಾಸಿಮಿಲಿ ಸಹಿ ಹಾಕಬಾರದು) ಹಾಗೂ ಮೊಹರು ಹಾಕಿರಬೇಕು. (ಜೆರಾಕ್ಸ್ ಅಂಗೀಕರಿಸಲಾಗುವುದಿಲ್ಲ). ವಿದ್ಯಾರ್ಥಿಯ ಅರ್ಜಿಯನ್ನು ಪ್ರತ್ಯೇಕವಾಗಿ ಸಲ್ಲಿಸಿದ್ದಲ್ಲಿ ತಿರಸ್ಕರಿಸಲಾಗುವುದು, ಇದರಿಂದ ಉಂಟಾಗುವ ವಿಳಂಬ ಮತ್ತು ಮೀಸಲಾತಿ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕವಿನಾಯಿತಿ ಕೈತಪ್ಪುವುದರಿಂದ ಆಯಾ ಸಂಸ್ಥೆಯವರೇ ಪೂರ್ಣ ಜವಾಬ್ದಾರರಾಗುತ್ತಾರೆ.

8. ಸರ್ಕಾರದ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಆಇ/18/ಟಿಎಆರ್/2015, ದಿನಾಂಕ:01-07-2015ರ ಆದೇಶದಂತೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಅವರು ಹೊಂದಿರುವ ರಾಷ್ಟ್ರೀಕೃತ ಬ್ಯಾಂಕ್(Nationalised Bank)ಖಾತೆಗಳಿಗೆ ನೇರವಾಗಿ ಎನ್.ಇ.ಎಫ್.ಟಿ ಮುಖಾಂತರ ಫಲಾನುಭವಿಗಳಿಗೆ ಜಮೆ ಮಾಡಬೇಕೆಂದು ತಿಳಿಸಿರುವ ಹಿನ್ನಲೆಯಲ್ಲಿ <u>ವಿದ್ಯಾರ್ಥಿಗಳು ಹೊಂದಿರುವ ರಾಷ್ಟ್ರೀಕೃತ **ಬ್ಯಾಂಕ್(Nationalised Bank)** ಖಾತೆಗಳ ಸಂಖ್ಯೆ**(Account Number), ಐ.ಎಫ್.ಎಸ್.ಸಿ ಕೋಡ್(I.F.S.C code) ಮತ್ತು ಬ್ಯಾಂಕ್‌ಗಳಲ್ಲಿ ಕಳೆದ ಮೂರು ತಿಂಗಳೊಳಗೆ ಹಣವನ್ನು ಕಟ್ಟಿರುವ ಮತ್ತು** ಹಣಪಡೆದಿರುವ ವಿವರದ ನಕಲು ಪ್ರತಿ(ಜೋಟೊ ಪ್ರತಿ)ಯನ್ನು ಅನುಬಂಧ**-9 (Form-9) ಮ್ಯಾನಡೇಟ್ ಫಾರ್ಮ್ (Mandate Form)** ಜೊತೆಯಲ್ಲಿ ಲಗತ್ತಿಸುವುದು.</u>

9. ಪ್ರಸಕ್ತ ಸಾಲಿನಲ್ಲಿ ಮಂಜೂರಾತಿ ವಿಧಾನವನ್ನು ಪರಿಷ್ಕರಿಸಲಾಗಿರುತ್ತದೆ. ಲಗತ್ತಿಸಿರುವ ಅನುಬಂಧ-2 ರಲ್ಲಿ ವಿದ್ಯಾರ್ಥಿಗಳ ಪಟ್ಟಿಯನ್ನು ಯಥಾವತ್ತು Annexure ಪ್ರಕಾರ MS-Excel ನಲ್ಲಿ ತಯಾರಿಸಿ ಸಿ.ಡಿ (CD)ಯಲ್ಲಿ ತುಂಬಿ, ಅದರ ಮೇಲೆ ಸಂಸ್ಥೆಯ ಹೆಸರನ್ನು ನಮೂದಿಸಿ **ಸಹಾಯಕ ನಿರ್ದೇಶಕರು (ಎಸಿಎಂ), ಕೊಠಡಿ ಸಂಖ್ಯೆ 406, 4ನೇ ಮಹಡಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು-560 001,** ಇವರಿಗೆ ಪ್ರತ್ಯೇಕವಾಗಿ ಕಳುಹಿಸಿಕೊಡಬೇಕು ಹಾಗೂ ಅದರ ಸಾಫ್ಟ್ ಪ್ರತಿಯನ್ನು **<u>dteschscst@gmail.com</u>** ಗೆ ಕಳುಹಿಸುವುದು.

10. ವಿದ್ಯಾರ್ಥಿಗಳ ಶುಲ್ಕವಿನಾಯಿತಿ ಮಂಜೂರಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸುವ ವಿಧಾನ, ಶಿಫಾರಸ್ಸು ಮಾಡುವ ಮಂಜೂರಾತಿಯಾದ ಅಥವಾ ಮಂಜೂರಾತಿಯಾಗದೆ ಆಕ್ಷೇಪಣೆಗಳ ಬಗ್ಗೆ ಮಾಹಿತಿಯನ್ನು ಕೆಲವು ಇಂಜಿನಿಯರಿಂಗ್ ಸೂಚನಾ ಫಲಕಗಳಲ್ಲಿ ಪ್ರಚುರ ಪಡಿಸದಿರುವುದು ಕಂಡುಬಂದಿರುತ್ತದೆ. ಈ ಮಾಹಿತಿ ವಿದ್ಯಾರ್ಥಿಗಳಿಗೆ ತಿಳಿಯದೆ ಅವರನ್ನು ನಿರ್ದೇಶನಾಲಯಕ್ಕೆ ನೇರವಾಗಿ ಕಳುಹಿಸುತ್ತಿರುವುದು, ಪೂರ್ಣ ಮಾಹಿತಿ ನೀಡದೆ ಶುಲ್ಕ ಕಟ್ಟಲು ಒತ್ತಾಯಿಸುವುದು ಗಮನಕ್ಕೆ ಬಂದಿರುತ್ತವೆ. ಇಂತಹ ಪ್ರಕರಣಗಳು ಸೃಷ್ಟಿಯಾಗದ ರೀತಿಯಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

11. ಶುಲ್ಕ ವಿನಾಯಿತಿಗಾಗಿ ವಿದ್ಯಾರ್ಥಿಗಳ ಅರ್ಜಿಗಳನ್ನು ಲಗತ್ತಿಸಿರುವ ಪ್ರಸ್ತಾವನೆಯನ್ನು ಈ ಕಛೇರಿಗೆ ಮಂಜೂರಾತಿಗಾಗಿ ಕಳುಹಿಸಲು ಅಂತಿಮ ದಿನಾಂಕ:30-10-2018. ನಂತರದಲ್ಲಿ ಬಂದ ಅರ್ಜಿಗಳನ್ನು

ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಹಾಗೂ ಮಂಜೂರಾತಿಯ ವಿಳಂಬವನ್ನು ತಪ್ಪಿಸಲು ಅರ್ಜಿಗಳನ್ನು ಮತ್ತು ದಾಖಲಾತಿಗಳನ್ನು ಸಂಸ್ಥೆಯವರು ಪರಿಶೀಲಿಸಿ ಸರಿಯಾಗಿದೆ ಎಂದು ತಿಳಿದು ಬಂದಲ್ಲಿ ಪ್ರಸ್ತಾವನೆಯನ್ನು ಅಂತಿಮ ದಿನಾಂಕ ರೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಬೇಕು.

<u>ವಿಶೇಷ ಸೂಚನೆ</u> :-

ಸಂಸ್ಥೆಯವರು ಪ್ರಸ್ತಾವನೆಯನ್ನು ಅನುಬಂಧ-1ಎ,ಬಿ ಮತ್ತು ಅನುಬಂಧ-2 ರಲ್ಲಿ ದ್ವಿ-ಪ್ರತಿಗಳಲ್ಲಿ ಎಲ್ಲಾ ಕಾಲಂಗಳನ್ನು ಭರ್ತಿ ಮಾಡಿ ವಿದ್ಯಾರ್ಥಿಯ ಅರ್ಜಿ ಸೇರಿದಂತೆ ಈ ಕೆಳಕಂಡ ಅವಶ್ಯಕ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಸಲ್ಲಿಸಬೇಕು.

ಅ). ಜಾತಿ ಪ್ರಮಾಣ(ನಮೂನೆ-ಡಿ) ಪತ್ರದ ಪ್ರತಿ ಮತ್ತು ವಾರ್ಷಿಕ ಆದಾಯ ಪ್ರಮಾಣ ಪತ್ರದ ಪ್ರತಿ

ಆ). ತಂದೆ/ತಾಯಿ/ಪೋಷಕರ ವೇತನ ಪ್ರಮಾಣ ಪತ್ರ(salary slip) ಕಡ್ಡಾಯವಾಗಿ ನೀಡುವುದು.

ಇ). ತಂದೆ/ತಾಯಿ ಮೃತ ಹೊಂದಿದ್ದರೆ ಮರಣ ಪ್ರಮಾಣ ಪತ್ರದ ಪ್ರತಿ.

ಈ). ಆನ್‌ಲೈನ್‌ನಲ್ಲಿ ನೀಡಿರುವ ಪ್ರವೇಶ ಹಂಚಿಕೆ ಪತ್ರ ಹಾಗೂ ರಸೀತಿ ಸಲ್ಲಿಸಬೇಕು.

ಉ). ವಿದ್ಯಾರ್ಥಿಯ ಹಿಂದಿನ ವರ್ಷದ ಅಂಕಪಟ್ಟಿಯನ್ನು ಸಲ್ಲಿಸುವುದು.

ಊ). ವಿದ್ಯಾರ್ಥಿಯ ರಾಷ್ಟ್ರೀಕೃತ ಬ್ಯಾಂಕ್ ಖಾತೆಯ ವಿವರದ ಮಾಹಿತಿ ಸಲ್ಲಿಸುವುದು.

ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ ವಿವರ, ಅರ್ಜಿನಮೂನೆ, ಎನ್.ಇ.ಎಫ್.ಟಿ ಗೆ ಬೇಕಾದಂತಹ ಬ್ಯಾಂಕ್‌ನ ಪೂರ್ಣ ವಿವರವುಳ್ಳ ಅನುಬಂಧ-9(Form-9) ಮ್ಯಾನಡೇಟ್ ಫಾರ್ಮ್ (Mandate Form) ಮತ್ತು ಅನುಬಂಧಗಳನ್ನು ಈ ಇಲಾಖೆಯ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ವಿದ್ಯಾರ್ಥಿಯ ಅರ್ಜಿ ನಮೂನೆಯನ್ನು ವಿದ್ಯಾರ್ಥಿ/ಪೋಷಕರ/ಇತರರ ಬಳಿಯಲ್ಲಿ ಕಳುಹಿಸಿ ಕೊಡಬಾರದಾಗಿಯೂ ಪ್ರಾಂಶುಪಾಲರಿಗೆ ತಿಳಿಸಿದೆ. ಒಂದು ವೇಳೆ ನೀವು ಕಳುಹಿಸಿಕೊಟ್ಟರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇದಕ್ಕೆ ನೇರ ಹೊಣೆ ಪ್ರಾಂಶುಪಾಲರೆ ವಹಿಸಬೇಕಾಗಿರುತ್ತದೆ.

ಅಪೂರ್ಣವಾದ, ಸಹಿಯಿಲ್ಲದ ಅರ್ಜಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಮತ್ತು ನಿಗಧಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಆಕ್ಷೇಪಣೆಯೊಂದಿಗೆ ಹಿಂದಿರುಗಿಸಲಾಗುವುದು. ಈ ಕಾರಣಗಳಿಗಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೈತಪ್ಪಿದಲ್ಲಿ, ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

http://dte.kar.nic.in

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001

ಇವರಿಗೆ :-

1. ಪ್ರಾಂಶುಪಾಲರು, ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ಇವರ ಗಮನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.(ಈ ಸುತ್ತೋಲೆಯನ್ನು ವಿದ್ಯಾರ್ಥಿಗಳ ಮಾಹಿತಿ ಮತ್ತು ಗಮನಕ್ಕಾಗಿ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ)
2. ಈ ನಿರ್ದೇಶನಾಲಯ ಸೂಚನಾ ಫಲಕಕ್ಕೆ.
3. ಪಿ.ಆರ್.ಓ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಪ್ರಚುರ ಪಡಿಸಲು).
5. ಹೆಚ್ಚುವರಿ ಪ್ರತಿ (ಕಡತಕ್ಕೆ).